**ಓಎಸ್ ನಂಃ 41/2018**
**ಡಿಡಬ್ಲೂಃ 2**

**ಸಾಕ್ಷಿಗೆ ದಿನಾಂಕ 18-12-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಮ್.ವಿ.ಎಲ್. ವಕೀಲರಿಂದ

ಈಗ ಪ್ರತಿವಾದಿ ಕಂಪನಿಯ ಮಾಲಿಕತ್ವ ಮತ್ತು Administration ಅದಾನಿ ಕಂಪನಿಯವರು ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಮಾಲಿಕತ್ವ ಬದಲಾಗಿದೆ ಆದರೆ Administration ಈಗಲೂ Orient Company ಮಾಡುತ್ತಿದೆ ಎಂದು ನುಡಿಯುತ್ತಾರೆ. ಈಗ 1ನೇ ಪ್ರತಿವಾದಿ ಕಂಪನಿಯ ಎಲ್ಲ Administration ಅದಾನಿ ಕಂಪನಿಯವರು ಮಾಡುತ್ತಿದ್ದಾರೆ ಎಂದರೆ ಸರಿ. 2016-17 ರಲ್ಲಿ ನೀವು 1ನೇ ಪ್ರತಿವಾದಿ ಕಂಪನಿಯನ್ನು ಸೇರಿರಲಿಲ್ಲ ಎಂದರೆ ಸರಿ. ನಿಮಗೆ ಈ ಪ್ರಕರಣದ ಯಾವುದೇ ಮಾಹಿತಿ ವೈಯಕ್ತಿಕವಾಗಿ ಇಲ್ಲ ಎಂದರೆ ಸಾಕ್ಷಿ ನಾನು ಎಲ್ಲ ದಾಖಲೆಗಳನ್ನು ನೋಡಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಗಳನ್ನು ಖುದ್ದಾಗಿ ಹೋಗಿ ನೋಡಿರುತ್ತೇನೆ. ದಾವಾ ಆಸ್ತಿಯು ನಿಮ್ಮ ಕಂಪನಿಯ ಕಂಪೌಡ್ ವಾಲ್ ಗೆ ಹತ್ತಿಕೊಂಡು ಇದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಪಿ-9 ಭಾವಚಿತ್ರ ತೋರಿಸಲಾಗಿ ಅದರಲ್ಲಿ ಕಾಣುವ ಗೋಡೆಯ ಪಕ್ಕದಲ್ಲಿ ಬೆಳೆ ಬೆಳೆದಿರುವ ಜಾಗ ದಾವಾ ಆಸ್ತಿ ಎಂದು ಕೇಳಿದಾಗ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ನಮ್ಮ ಕಂಪೌಂಡ್ ಮತ್ತು ದಾವಾ ಆಸ್ತಿಯ ನಡುವೆ ಬೇರೆ ಜನರ ಆಸ್ತಿ ಇದೆ ಎಂದು ನುಡಿಯುತ್ತಾರೆ. ನನಗೆ ಸದರಿ ನಡುವಿನ ಆಸ್ತಿಯು ಯಾರಿಗೆ ಸಂಬಂಧಪಟ್ಟಿದ್ದು ಮತ್ತು ಅದರ ಸರ್ವೆ ನಂಬರ್ ಗೊತ್ತಿಲ್ಲ. 2017 ರಿಂದ 1ನೇ ಪ್ರತಿವಾದಿ ಸಿಮೆಂಟ್ ಫ್ಯಾಕ್ಟರಿಯಿಂದ ಬರುವ ಧೂಳಿನಿಂದ ಅಕ್ಕಪಕ್ಕದ ಆಸ್ತಿಗಳಲ್ಲಿ ಬೆಳೆಯುವ ಬೆಳೆಗಳು ಹಾಳಾಗುತ್ತಿವೆ ಎಂದರೆ ಸರಿಯಲ್ಲ.

ದಿಃ 22.12.2017 ರಂದು ವಾದಿಯರು 1ನೇ ಪ್ರತಿವಾದಿಯ ವಿರುದ್ಧ ತಹಶೀಲ್ದಾರ್ ಚಿತ್ತಾಪುರ್ ರವರಿಗೆ ನಿಪಿ-4ರಂತೆ ದೂರು ನೀಡಿದ್ದಾರೆ ಎಂದರೆ ಸರಿ. ಸದರಿ ದೂರಿನ ಪ್ರತಿಗಳನ್ನು DC Kalaburagi ಮತ್ತು AC Sedam ಇವರಿಗೆ ಕಳಹಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ತಹಶೀಲ್ದಾರ್ ಚಿತ್ತಾಪುರ್ ಇವರು ದಿಃ 01.01.2018ರ ಆದೇಶದಂತೆ

ದಾವಾ ಆಸ್ತಿಯಲ್ಲಿ ಬೆಳೆ ನಾಶದ ಕುರಿತು ಪಂಚನಾಮೆ ಮಾಡಬೇಕು ಎಂದು VA ಮತ್ತು RI ಇವರಿಗೆ ಆದೇಶ ಮಾಡಿದ್ದರು ಎಂದರೆ ಸಾಕ್ಷಿ ನಮಗೆ ಆದೇಶದ ಪ್ರತಿ ಜೂನ್ 2018ರಲ್ಲಿ ಸಿಕ್ಕಿತು ಎಂದು ನುಡಿಯುತ್ತಾರೆ. ಸದರಿ ಆದೇಶದಂತೆ ದಿಃ 20.02.2018ರಂದು VA ಮತ್ತು RI ಇವರು ಬೆಳೆ ನಾಶದ ಕುರಿತು ದಾವಾ ಆಸ್ತಿಯಲ್ಲಿ ಪಂಚನಾಮೆ ಮಾಡಿ ವರದಿಯನ್ನು ತಹಶೀಲ್ದಾರ್ ಇವರಿಗೆ ಕಳಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಿಃ 05.03.2018ರಂದು ತಹಶೀಲ್ದಾರ್ ಇವರು ನಿಮಗೆ ಒಂದು ನೋಟೀಸು ಕಳುಹಿಸಿ ವಾದಿಯ ದಾವಾ ಆಸ್ತಿಯಲ್ಲಾದ ಬೆಳೆ ನಾಶದ ಪರಿಹಾರ ಕೊಡಬೇಕು ಎಂದು ಹೇಳಿದರು ಎಂದರೆ ಸಾಕ್ಷಿ ನಮಗೆ ಯಾವುದೇ ನೋಟೀಸು ತಲುಪಿಲ್ಲ ಎಂದು ನುಡಿಯುತ್ತಾರೆ. ನಿಡಿ-2ರಲ್ಲಿ ನೀವು ತಹಶೀಲ್ದಾರ್ ರವರ 05.03.2018ರ ನೋಟೀಸಿನ ಕುರಿತು ನಮೂದು ಮಾಡಿದ್ದು ಹಾಗಾದರೆ ನಿಮಗೆ ಸದರಿ ನೋಟೀಸಿನ ಬಗ್ಗೆ ಮೊದಲೇ ಗೊತ್ತಿತ್ತು ಎಂದರೆ ಸಾಕ್ಷಿ ಇರಬಹುದು ನಾನು ಆ ಸಮಯದಲ್ಲಿ ಕೆಲಸಕ್ಕೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಡಿ-1ರಂತೆ ದಿಃ 19.06.2018ರಂದು ಸಹ ನಿಮಗೆ ಒಂದು ನೋಟೀಸು ಬಂದಿದೆ ಎಂದರೆ ಸರಿ. ನಿಡಿ-2ರಲ್ಲಿ Inward number ನಮೂದು ಮಾಡಿಲ್ಲ ಎಂದರೆ ಸರಿ.

ದಿಃ 16.04.2018 ರಂದು ವಾದಿಯು ನಿಮಗೆ ಒಂದು ಲೀಗಲ್ ನೋಟೀಸ್ ನಿಪಿ- 6 ರಂತೆ ಕಳಹಿಸಿದ್ದ ಎಂದರೆ ಸರಿ. ನೀವು ನಿಪಿ-6 ನೋಟೀಸಿಗೆ ಉತ್ತರ ಕೊಟ್ಟಿಲ್ಲ ಎಂದರೆ ಸರಿ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.